ಆಗಿಂದಾಗಲೇ ಕಿರುಗಣ್ಣು ಮಾಡಿ ಆ ಕಳ್ಳನನ್ನು ನೋಡುತ್ತ ಮಂತ್ರಿಗಳನ್ನು ಇನ್ನಷ್ಟು ಸನಿಹಕ್ಕೆ ಬರಮಾಡಿಸಿ ಪ್ರಭುಗಳು, 'ಅಮಾತ್ಯರೇ ಅಲ್ಲಿ ಆ ಕಲ್ಲು ಹೊರುತ್ತಿರುವ ಕಳ್ಳನನ್ನು ಕಳೆದ ವಾರ ತಾನೇ ಚಾರಕರು ಎಳೆದು ತಂದು, 'ದೇವರು ಇವನು ಸಾಮಾನ್ಯ ಚೋರನಲ್ಲ, ಧರ್ಮ ಮಂದಿರಕ್ಕೆ ಕನ್ನವಿಕ್ಕಲು ಹೋಗಿ, ಧನಕನಕ ಚಿನ್ನಾಭರಣ ಸಮೇತ ಸಿಕ್ಕಿದವನು' ಅಂದಿದ್ದರಲ್ಲಾ, ನಾನಾದರೋ ಮಾತು ಎರಡಿಲ್ಲದೆ, 'ಹದ್ದು ಕಾಗೆಗಳು ಇವನ ಮುಂಡವನ್ನು ಉಂಡು ಸಂಭ್ರಮಿಸಲಿ, ಕೇಳಿದರೆ ಇವನ ರುಂಡವನ್ನಷ್ಟೇ ಹೆಂಡತಿಯ ಕಡೆ ಎಸೆಯಿರಿ ಅಂದು ಶಿರಚ್ಛೇದನಕ್ಕೆ ಆಜ್ಞೆ ಇತ್ತಿದ್ದೆನಲ್ಲಾ' ಅಂದರು.

ಅದಾಗತಾನೇ ಹಿಂದಣ ಒಂದು ಘಳಿಗೆಯಲ್ಲಿ ಗುಡಿಯ ಗೋಪುರದ ಕಳಶದ ಮೇಲೆ ವಿಹರಿಸುತ್ತಿರುವರೆಂಬಂತಿದ್ದ ಮಹಾರಾಜರಿಗೆ, ವಾರದ ಹಿಂದೆ ಜರುಗಿದ ಧರ್ಮಮಂದಿರದ ಕಳ್ಳತನದ ಹಿಂದಿನ ಸತ್ಯವನ್ನು ಅರುಹುವುದು ಹೇಗೆಂಬ ಚಿಂತೆಯ ಒಂದು ಗೆರೆಯನ್ನು ಮುಖದಲ್ಲಿ ಮೂಡಿಸಿಕೊಂಡು ಮಂತ್ರಿಗಳು, 'ಪ್ರಭೋ, ಚಾರಕರು ತಮ್ಮ ಆಜ್ಞೆಯನ್ನು ಪಾಲಿಸಲಿಲ್ಲ' ಅಂದರು.

'ಹೌದೇ, ಕರೆಸಿರಿ ಆ ದ್ರೋಹಿ ಚಾರಕರನ್ನು.'

'ಪ್ರಭು ಚಿತ್ತವಿಟ್ಟು ಆಲಿಸುವವರಾಗಿ, ವೃಥಾ ಆತುರವೇಕೆ? ಅಂದು ಈ ಬಲುಗಳ್ಳ ಲುಪ್ತಕನು ತಮ್ಮ ಮುಂದೆ ಆಡಿದ ಒಂದೆರಡು ಮಾತನ್ನು ನೆನಪಿಸುವೆ. ಅಪರಾಧಿಯನ್ನಾಗಿಸಿ ತಂದ ಈ ಲುಪ್ತಕನು ಪ್ರಭೂ ನಾನು ತಪ್ಪು ಎಸಗಿದವನಲ್ಲ. ಧರ್ಮ ಮಂದಿರದ ಒಂದು ಕೋಣೆಯಲ್ಲಿ ಸರಿರಾತ್ರಿ ಉರಿಯುತ್ತಿದ್ದ ದೀಪವನ್ನು ಗ್ರಹಿಸಿ, ಆ ಮಾಡು ಹತ್ತಿ ಕಾಣಬಾರದ್ದನ್ನು ಕಂಡು, ಆಡಬೇಕಾದ ಮಾತು ಆಡಿದನೆಂದನಲ್ಲ! ಅದರ ಫಲವಾಗಿ ಸನ್ನಿಧಿಗೆ ಬರಬೇಕಾಯಿತು. ನಾನು ಆರೋಪಿ ನಿಜ, ಅಪರಾಧಿಯಲ್ಲ ಎನ್ನುವಲ್ಲಿ ತಾವು ಸಿಟ್ಟು ಹತ್ತಿ, 'ಎಲಾ ಖೂಳನೇ, ಕಳ್ಳನಾದವನಿಗೆ ನಿತ್ಯವೂ ಬೊಗಳಲು ನೂರು ಸುಳ್ಳುಂಟು. ಧರ್ಮಕ್ಕೆ ಇರುವುದು ಒಂದೇ ನಾಲಿಗೆ. ಅದು ಸತ್ಯವಾಕ್ಕು, ಗೊತ್ತೇ ನಿನಗೆ. ಧರ್ಮಕಟ್ಟಳೆಯ ಮೇಲೆಯೇ ತಪ್ಪು ಹೊರಿಸಲು ನಿನಗೆಷ್ಟು ಧೈರ್ಯ' ಎಂದು ತಾವು ಅವನಿಗೆ ಶಿರಚ್ಛೇದನದ ಶಿಕ್ಷೆ ವಿಧಿಸಿದಿರಿ ಅಲ್ಲವೇ? ಆದರೆ, ಅರವತ್ನಾಲ್ಕು ಕಲೆಗಳಲ್ಲಿ ಚೋರವಿದ್ಯೆಯನ್ನು ಕರಗತ ಮಾಡಿಕೊಂಡಿದ್ದ ಲುಪ್ತಕನು ಆಸ್ಥಾನದಲ್ಲಿ ವಿದಿಶಾ ನಗರಕ್ಕೆಲ್ಲಾ ಕೇಳುವಂತೆ, 'ಆಹಾ ಎರಡೂರು ಕೂಡುವಾ ಕುಣಿಯೊಂದರಲಿ ಜಗವೆಲ್ಲ ಬಿದ್ದು ಒದ್ದಾಡುತಿಹುದು' ಎಂದು ಪದ ಹೇಳಿಕೊಂಡು ಹೋದನಲ್ಲಾ. ಅವನಿಗೆ ಎಷ್ಟು ಧೈರ್ಯ ಹೇಳಿ? ಅದು ಅಂತಿರಲಿ, ಧರ್ಮಸಂಸ್ಥಾನದಲ್ಲಿ ಕಳ್ಳತನ ಮಾಡಿದವ ಅಲ್ಲವೇ ಅಲ್ಲವೆಂಬ ಸಂಗತಿಯು ಅವನ ಶಿರಚ್ಛೇದನಕ್ಕೆ ಮುನ್ನ ಒಂದೆರಡು ಕ್ಷಣ ಮೊದಲು ನನಗೆ ಗಣಿಕಾ ಸ್ತ್ರೀ ಪಾಠಕೆಯಿಂದ ತಿಳಿದು ಬಂದಿತು. ಆ ನಿಮಿತ್ತ ಅವನನ್ನು ಶಿರಚ್ಛೇದನಾಜ್ಞೆಯಿಂದ ಬಿಡುಗಡೆಗೊಳಿಸಿ ಸೆರೆಮನೆಗೆ ತಳ್ಳಿಸಿದವನು ನಾನೇ...'

'ಅಹುದೇ ಇವನು ಧರ್ಮಸಂಸ್ಥಾನಕ್ಕೆ ಕನ್ನಗತ್ತರಿಯಿಟ್ಟ ಚೋರನಲ್ಲವೇ? ಹಾಗೆ ನೀವು ಕೈಗೊಂಡ ಬಿಡುಗಡೆಯ ನಿರ್ಧಾರದ ಕತೆಯೇನು?'

'ದೇಶವತ್ಸಲರೇ, ಘಟನೆ ಜರುಗಿದ ಮರುದಿನ ಸಾಯಂಸಮಯದಲ್ಲಿ ಗಣಿಕೆ ಪಾಠಕೆ ಬಂದು ನನ್ನಲ್ಲಿ ಬಿನ್ನವಿಸಿಕೊಂಡದ್ದು ಇಂತಿದೆ. ಅವಳು ಹೇಳಿದ್ದನ್ನು ಚಕಾರ ತಪ್ಪದೆ ನಿರೂಪಿಸುವೆ ಕೇಳಿ' ಅಂದರು.

'...ಪಿತೃಸಮಾನ ಮಂತ್ರಿವರ್ಯ ಅಜಿತಸೇನರೇ ಒಂದು ದಿನ ನಮ್ಮ ವಿದಿಶಾ ನಗರದ ದಕ್ಷಿಣವಲಯದ ಆ ಧರ್ಮಸಂಸ್ಥೆಗೆ ಗುರುವರ್ಯ ನಿತ್ಯಾನಂದ ವಾರಿಧಿಯವರು ನನ್ನನ್ನು ತಮ್ಮ ಭೋಜನ ಸಮಯಕ್ಕೆ ಅವರ ಆಪ್ತ ಶಿಷ್ಯನ ರಕ್ಷಣೆಯಲ್ಲಿ ಬರಮಾಡಿಕೊಂಡಿದ್ದರು. ನಾನಾದರೊ ಇಷ್ಟವಿಲ್ಲದಿದ್ದರೂ, ಅದು ಇರುವಂತೆ ನಟಿಸುತ್ತ ಹೋಗುತ್ತಿದ್ದೆ. ಸರಿರಾತ್ರಿಯವರೆಗೂ ಗುರುಗಳೊಡನೆ